# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 36/2014**

**ದೋ.ಸಾ. : 32 ಫ್ರಾ.ಸಾ. : 16**

ಸಾಕ್ಷಿಯ ಹೆಸರು : ಸಂತಾನ್ ಇಲಿಯಾಸ್ ರೇಗೋ
ತಂದೆಯ ಹೆಸರು : ಇಲಿಯಾಸ್
ವಯಸ್ಸು : 52 ವರ್ಷ
ಕೆಲಸ : ಚಾಲಕ
ವಾಸ : ಚರ್ಚ್ ವಾಡಾ, ಕದ್ರಾ, ಕಾರವಾರ

**ದಿನಾಂಕಃ 06–12–2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ನಮ್ಮ ಮನೆ ಕದ್ರಾದ ಚರ್ಚ್ ವಾಡದಲ್ಲಿರುತ್ತದೆ ಹಾಗೂ ನಮ್ಮ ಮನೆಯಲ್ಲಿ ಒಟ್ಟು 6 ಜನ ಇರುತ್ತೇವೆ. ನಾನು ಕಳೆದ 19 ವರ್ಷಗಳಿಂದ ಕೈಗಾದಲ್ಲಿ ಗುತ್ತಿಗೆ ಆಧಾರದ ಮೇಲೆ ಟೆಂಪೊ ಟ್ರಾವೇಲರ್ ಚಾಲಕನಾಗಿ ಕೆಲಸ ಮಾಡುತ್ತಿದ್ದೇನೆ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿ ನನಗೆ ಗೊತ್ತು, ಆತನು ನಮ್ಮ ಪಕ್ಕದ ಮನೆಯವನು. ಆತನ ಹೆಸರು ಗುಸ್ತಿನ್ ಗ್ರೆಗೊರಿ ಯಾಗಿದ್ದು, ಆತನನ್ನು ಊರಿನಲ್ಲಿ ಎಲ್ಲರೂ ಗಿರಿ ಎಂದು ಕರೆಯುತ್ತಾರೆ. ಆತನ ತಂದೆಯೂ ಸಹ ಕೈಗಾದಲ್ಲಿ ಗುತ್ತಿಗೆ ಆಧಾರದ ಮೇಲೆ ಟೆಂಪೊ ಟ್ರಾವೇಲರ್ ಚಾಲಕನಾಗಿ ಕೆಲಸ ಮಾಡುತ್ತಿದ್ದರು, ಆದರೆ ಈಗ ಅವರು ನಿವೃತ್ತಿಯಾಗಿರುತ್ತಾರೆ. ನಾನು ಅಲ್ಲಿ ಕೆಲಸಕ್ಕೆ ಸೇರಿದಾಗಿನಿಂದ, 2021–2022 ರ ವರೆಗೆ ನಮ್ಮ ಕೆಲಸವು ಪಾಳಿಯಲ್ಲಿದ್ದು, ಒಮ್ಮೆ ಒಂದು ಪಾಳಿಗೆ ಹಾಜರಾದರೆ, ಸತತ 24 ಗಂಟೆ ಕೆಲಸ ನಿರ್ವಹಿಸಿ, ನಂತರದ 24 ತಾಸು ವಿಶ್ರಾಂತಿ ಇರುತ್ತದೆ. ನನ್ನ ಕೆಲಸವು ಕೈಗಾದ ಕೆಲಸಗಾರರನ್ನು ಟೆಂಪೊ ಟ್ರಾವೇಲರ್ ನಲ್ಲಿ ಕರೆದುಕೊಂಡು ಹೋಗುವುದು ಹಾಗೂ ಕರೆದುಕೊಂಡು ಬಂದು, ಅವರುಗಳು ವಾಸಮಾಡುವ ಕಾಲೋನಿಯಲ್ಲಿ ಬಿಡುವುದು ನನ್ನ ಕೆಲಸವಾಗಿರುತ್ತದೆ ಹಾಗೂ ಪಾಳಿಯು ಬೆಳಿಗ್ಗೆ 06–00 ಗಂಟೆಯಿಂದ ಪ್ರಾರಂಭವಾಗುತ್ತಿತ್ತು.

2. ಪಾಳಿಯಲ್ಲಿ ಕೆಲಸಗಾರರನ್ನು ಕೆಲಸಕ್ಕೆ ಕರೆದುಕೊಂಡು ಹೋಗುವುದು ಹಾಗೂ ಬರುವುದಲ್ಲದೇ, ಪ್ರತಿದಿನ ರಾತ್ರಿ 01–00 ಗಂಟೆಗೆ ನೌಕರರನ್ನು ಹಾಗೂ ಅವರ ಕುಟುಂಬ

ಸದಸ್ಯರನ್ನು ನೌಕರರ ಕಾಲೋನಿಯಿಂದ ಕಾರವಾರದ ರೈಲ್ವೆ ನಿಲ್ದಾಣಕ್ಕೆ ಕರೆದುಕೊಂಡು ಬರುವುದು ಹಾಗೂ 04-30 ಗಂಟೆಗೆ ರೈಲ್ವೆ ನಿಲ್ದಾಣದಿಂದ ನೌಕರರನ್ನು ಹಾಗೂ ಅವರ ಕುಟುಂಬ ಸದಸ್ಯರನ್ನು ಕರೆದುಕೊಂಡು ಹೋಗಿ, ನೌಕರರ ಕಾಲೋನಿಗೆ ಬಿಡುವುದು ಆಗಿರುತ್ತದೆ. ನಮ್ಮ ಕೈಗಾದಲ್ಲಿ ಒಟ್ಟು 9 ಗಾಡಿಗಳು ಇರುತ್ತವೆ. ಅವುಗಳ ಪೈಕಿ 4 ಗಾಡಿಗಳು ಮಾತ್ರ ರೈಲ್ವೆ ನಿಲ್ದಾಣ ಬೇರೆ ಬೇರೆ ಅವಧಿಗಳಲ್ಲಿ ಬಂದು ಹೋಗುತ್ತವೆ. ರಾಜೀವನಗದರಲ್ಲಿರುವ ವಾಸವಾಗಿದ್ದ ಮೃತ ವೇಲು ಹಾಗೂ ಆತನ ಕುಟುಂಬದವರ ಪರಿಚಯ ನನಗೆ ಇರುತ್ತದೆ. ನಾನು ನಮ್ಮ ಮನೆಗೆ ಹೋಗಬೇಕಾದರೆ, ಅವರ ಮನೆಯ ಮುಂದೆಯೇ ಹೋಗಬೇಕಾಗಿತ್ತು. ಚರ್ಚ್ ವಾಡದಿಂದ ವೇಲುವಿನ ಮನೆಗೆ ನಡೆದುಕೊಂಡು ಹೋದರೆ 10 ನಿಮಿಷದ ದಾರಿಯಾಗಿರುತ್ತದೆ.

3. ನಾನು ಮನೆಗೆ ಊಟಕ್ಕೆ ಹೋದಾಗ ಟೆಂಪೋ ಟ್ರಾವೇಲರ್ ನ್ನು ನನ್ನ ಮನೆಯ ಮುಂದೆ ನಿಲ್ಲಿಸುತ್ತೇನೆ. ದಿಃ 14-02-2014 ರಂದು ರಾತ್ರಿ 08-30 ಸುಮಾರಿಗೆ ನಾನು ಓಡಿಸುತ್ತಿದ್ದ ಟೆಂಪೋ ಟ್ರಾವೇಲರ್ ನ್ನು ತೆಗೆದುಕೊಂಡು, ಮನೆಗೆ ಊಟಕ್ಕೆ ಬಂದಿದ್ದೆ, ಊಟ ಮಾಡಿ ಮನೆಯಲ್ಲಿದ್ದಾಗ, ರಾತ್ರಿ 10-45 ಗಂಟೆಗೆ ಆರೋಪಿ ನನಗೆ ಕರೆ ಮಾಡಿ, ಈಗ ರಾತ್ರಿ ರೈಲ್ವೆ ನಿಲ್ದಾಣಕ್ಕೆ ಹೋಗುವ ವಾಹನದ ಚಾಲಕರು ಯಾರು ಎಂದು ಕೇಳಿದ್ದು, ಅದಕ್ಕೆ ನಾನೇ ಹೋಗುತ್ತೇನೆ ಎಂದು ಹೇಳಿರುತ್ತೇನೆ. ಆಗ ಆರೋಪಿ ತನಗೆ ಪಡುಬಿದ್ರಿಗೆ ಹೋಗಬೇಕಾಗಿದ್ದು, ನಾನು ನಿಮ್ಮ ಟೆಂಪೋ ಟ್ರಾವೇಲರ್ ನಲ್ಲಿ ಬರುತ್ತೇನೆ ಎಂದು ಹೇಳಿದ್ದು, ಅದಕ್ಕೆ ನಾನು ಆತನಿಗೆ ಆಯ್ತು ಬಾ, ನಾನು 12-00 ಗಂಟೆಗೆ ಹೊರಡುತ್ತೇನೆ ಎಂದು ಹೇಳಿರುತ್ತೇನೆ.

4. ಆ ನಂತರ ರಾತ್ರಿ ಸುಮಾರು 12-30 ಗಂಟೆಗೆ ನಾನು ಟೆಂಪೋ ಟ್ರಾವೇಲರ್ ಹತ್ತಿರ ಬಂದಾಗ, ಆರೋಪಿ ಈಗಾಗಲೇ ನಾನು ಚಲಾಯಿಸುತ್ತಿದ್ದ ಟೆಂಪೋ ಟ್ರಾವೇಲರ್ ನಲ್ಲಿ ಬಂದು ಕುಳಿತುಕೊಂಡಿದ್ದ, ನಾನು ಆತನನ್ನು ಟೆಂಪೋ ಟ್ರಾವೇಲರ್ ನಲ್ಲಿ ಕೂರಿಸಿಕೊಂಡು, ರೈಲ್ವೆ ನಿಲ್ದಾಣದ ಕಡೆಗೆ ಹೊರಟಾಗ, ವೇಲುವಿನ ಮನೆಯ ಮುಂದುಗಡೆ ಬಹಳಷ್ಟು ಜನರು ಸೇರಿದ್ದರು, ಆಗ ನಾನು ಟೆಂಪೋ ಟ್ರಾವೇಲರ್ ನ್ನು ಅಲ್ಲಿಯೇ ಸ್ವಲ್ಪ ಹೊತ್ತು ನಿಲ್ಲಿಸಿ, ಅಲ್ಲಿದ್ದ ಜನರನ್ನು ಕೇಳಿದಾಗ, ಅವರು ವೇಲುವಿನ ಮಗಳಿಗೆ ಯಾರೋ ಹೊಡದು ಕೊಲೆ ಮಾಡಿದ್ದಾರೆ ಹಾಗೂ ಆತನ ಹೆಂಡತಿಗೂ ಸಹ ಹೊಡೆದಿರುತ್ತಾರೆ ಎಂದು ಹೇಳಿರುತ್ತಾರೆ. ಆ ಸಮಯದಲ್ಲಿ ಗಿರಿ ಯಾರ ಜೊತೆ ಮಾತನಾಡಿರುತ್ತಾನೆ ಎಂದು ನಾನು ನೋಡಿರುವುದಿಲ್ಲ. ಆ ನಂತರ ನಾನು

ವಾಹವನ್ನು ಅಲ್ಲಿಂದ ಚಲಾಯಿಸಿಕೊಂಡು,ಮಲ್ಲಾಪುರ ಕಡೆಗೆ ಹೋಗುತ್ತಿದ್ದಾಗ, ನಾನು ಆರೋಪಿಯ ಬಳಿ "ವೇಲುವಿನ ಮಗಳನ್ನು ಕೊಲೆ ಮಾಡಿದವನಿಗೆ ಹುಳ ಬಿದ್ದು ಸಾಯಲಿ, ಪಾಪ ಸಣ್ಣ ಮಗಳನ್ನು ಕೊಲೆ ಮಾಡಿರುತ್ತಾನೆ " ಎಂದು ಹೇಳಿರುತ್ತೇನೆ. ಆಗ ಆರೋಪಿ ಏನನ್ನು ಮಾತನಾಡಿರುವುದಿಲ್ಲ. ಆ ನಂತರ ನಾನು ಕಾಲೋನಿಗೆ ಹೋಗಿ, ನೌಕರರು ಹಾಗೂ ಅವರ ಕುಟುಂಬದ ಸದಸ್ಯರುಗಳನ್ನು ವಾಹನದಲ್ಲಿ ಕೂರಿಸಿಕೊಂಡು ರೈಲ್ವೆ ನಿಲ್ದಾಣಕ್ಕೆ ಹೋದಾಗ, ಅಲ್ಲಿ ಆರೋಪಿ ವಾಹನದಿಂದ ಇಳಿದು, ರೈಲ್ವೆ ನಿಲ್ದಾಣದ ಕಡೆಗೆ ಹೋಗಿರುತ್ತಾನೆ.

5. ಆ ನಂತರ ನಾನು ರೈಲ್ವೆ ನಿಲ್ದಾಣದ ಕೆಲಸ ಮುಗಿಸಿ, ವಾಪಸು ಮನೆಗೆ ಬರುವಾಗ, ವೇಲು ಮತ್ತು ಆತನ ಮಗ ಸತ್ಯ ನಾರಾಯಣ ಮೂರ್ತಿಯ ಕೊಲೆಯಾಗಿರುತ್ತದೆ ಎಂದು ತಿಳಿದು ಬಂತು ಹಾಗೂ ವೇಲುವಿನ ಹೆಂಡತಿ ಜಾನಕಿಗೂ ಸಹ ಯಾರೋ ಕಡಿದಿದ್ದರಿಂದ, ಆಕೆಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು ಎಂದು ತಿಳಿದು ಬಂತು. ಅದಾದ 4 ದಿನಗಳ ನಂತರ ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯೇ ಹಣದ ವಿಷಯವಾಗಿ ವೇಲು ಹಾಗೂ ಆತನ ಹೆಂಡತಿ ಮಕ್ಕಳನ್ನು ಕಡಿದಿರುತ್ತಾನೆ ಎಂದು ನನಗೆ ತಿಳಿದು ಬಂತು. ಈ ಕುರಿತು ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ.ಎ.ಎ ವಕೀಲರಿಂದ**

6. ಕದ್ರಾ ಪೊಲೀಸ್ ಠಾಣೆ ಚರ್ಚ್ ವಾಡದಲ್ಲಿರುತ್ತದೆ ಹಾಗೂ ಅದು ನಮ್ಮ ಮನೆಗೆ ಸಮೀಪದಲ್ಲಿರುತ್ತದೆ. ನಮ್ಮ ಮನೆ ಹಾಗೂ ಆರೋಪಿಯ ಮನೆಯ ಅಕ್ಕ-ಪಕ್ಕದಲ್ಲಿ ಸುಮಾರು ಮನೆಗಳು ಹಾಗೂ ಶಾಲೆ ಇರುತ್ತವೆ. ಆರೋಪಿ ತಂದೆ ಸಹ ನಮ್ಮ ಕೈಗಾದಲ್ಲಿ ಚಾಲಕನಾಗಿ ಕೆಲಸ ಮಾಡುತ್ತಿದ್ದು, ಆತನಿಗೆ ಪ್ರತಿ ತಿಂಗಳು ರೂ.15,000/-ಗಳು ಸಂಬಳ ಬರುತ್ತಿತ್ತು. ಆರೋಪಿಯ ಮನೆಯವರೆಲ್ಲರೂ ದುಡಿದು ತಿನ್ನುತ್ತಿದ್ದರು ಎಂದರೆ ಸರಿ. ಆರೋಪಿಯ ಮನೆಯಲ್ಲಿ, ಆತ, ಆತನ ಅಣ್ಣ, ಇತನ ಇಬ್ಬರು ತಮ್ಮಂದಿರು ಹಾಗೂ ತಂದೆ-ತಾಯಿ ವಾಸವಾಗಿದ್ದರು. ಆರೋಪಿಯ ಮನೆಯು ಕಟ್ಟಿಗೆಯ ಬೆಲಿಯುಳ್ಳ ಮನೆಯಾಗಿರುತ್ತದೆ. ಘಟನೆಯಾದ ನಂತರ ಚರ್ಚ್ ವಾಡದಲ್ಲಿ ನಿರಂತರ ಪೊಲೀಸ್ ಗಸ್ತು ಇತ್ತು ಎಂದರೆ ಸರಿ.

7. ಆರೋಪಿಯನ್ನು ಅವನ ಮನೆಯಿಂದಲೇ ಬಂಧಿಸಿರುತ್ತಾರೆ. ಆತನನ್ನು ಬಂಧಿಸುವ ಸಮಯದಲ್ಲಿ ಸುಮಾರು ಜನರು ಸೇರಿದ್ದರು ಎಂದರೆ ಸಾಕ್ಷಿಯು ಸೇರಿಲ್ಲ ಎಂದು ನುಡಿಯುತ್ತಾರೆ. ಆರೋಪಿಯನ್ನು ಬಂಧಿಸಿದ್ದನ್ನು,ನಾನು ನನ್ನ ಮನೆಯಿಂದಲೇ

ನೋಡಿರುತ್ತೇನೆ. ಮನೆಯ ಹೊರಗೆ ಎಷ್ಟು ಜನರು ಸೇರಿದ್ದರು ಎಂದು ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. ನನಗೆ ಸ್ಥಳದಲ್ಲಿ ಏನೂ ವಿಷಯ ಗೊತ್ತಾಗಲಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿ ಎಂದಿಗೂ ನನ್ನ ಗಾಡಿಯಲ್ಲಿ ಬಂದಿಲ್ಲ ಹಾಗೂ ಆತನನ್ನು ನಾನು ರೈಲ್ವೆ ನಿಲ್ದಾಣಕ್ಕೆ ಬಿಟ್ಟಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.
ಸಹಿ ಇದೆ/-
(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ